# ರಾಮಕಥೆಯೆಂಬ ಪಾವನಗಂಗೆ

ಸ್ವಾಮಿ ಮುಕ್ತಿಪದಾನಂದ

## ಮಂದಿರವೋ ಮಂದಾಕಿನಿಯೋ?

**ಗೋಸ್ವಾಮಿ** ತುಲಸೀದಾಸರು ತಮ್ಮ ರಾಮಚರಿತ ಮಾನಸದಲ್ಲಿ, ರಾಮಕಥೆಯನ್ನು ಸರೋವರ ಅಥವಾ ನದಿಗೆ ಹೋಲಿಸಿದ್ದಾರೆ. ಅವರು ಹೀಗೆ ಹೇಳುತ್ತಾರೆ:


**ಪೂಛೇಹು ರಘುಪತಿ ಕಥಾಪ್ರಸಂಗಾ**
**ಸಕಲ ಲೋಕ ಜಗ ಪಾವನಿ ಗಂಗಾ** ೧-೧೧೧-೪

ಭಾರತೀಯ ಸಂಸ್ಕೃತಿಯಲ್ಲಿ ದೇವಮಂದಿರಗಳು ಮತ್ತು ನದಿಗಳಿಗೆ ಪವಿತ್ರಸ್ಥಾನವಿದೆ. ತುಲಸೀದಾಸರು ವಾಲ್ಮೀಕಿ ರಾಮಾಯಣವನ್ನು ರಾಮನ ಮಂದಿರ ಎನ್ನುತ್ತಾರೆ. ತಮ್ಮ ಕೃತಿಯನ್ನು ಪವಿತ್ರ ನದಿಯಾದ ಮಂದಾಕಿನಿಗೆ ಹೋಲಿಸುತ್ತಾರೆ. ದೇವಮಂದಿರ ಮತ್ತು ಮಂದಾಕಿನಿ ನದಿಗಳ ನಡುವೆ ವ್ಯತ್ಯಾಸವೇನು? ದೇವಮಂದಿರ ಒಂದೆಡೆ ಸ್ಥಿರವಾಗಿರುತ್ತದೆ. ಆದರೆ ನದಿ ಒಂದೆಡೆ ಇರುವುದಿಲ್ಲ. ಅದು ಹರಿಯುತ್ತಿರುತ್ತದೆ. ಮಂದಿರವನ್ನು ನಿಯಮಿತ ಕಾಲದಲ್ಲಿ ತೆರೆಯುತ್ತಾರೆ, ನಿಯಮಿತ ಕಾಲದಲ್ಲಿ ಮುಚ್ಚುತ್ತಾರೆ. ನೀವು ಸಕಾಲಕ್ಕೆ ಬಾರದಿದ್ದರೆ, ನಿಮಗೆ ದೇವರ ದರ್ಶನ ಆಗುವುದಿಲ್ಲ. ಆದರೆ ಗಂಗೆಗೆ ಸಮಯದ ಈ ಗೊಡವೆಯಿಲ್ಲ. ಎಲ್ಲಕಾಲದಲ್ಲೂ ಅದರ ದ್ವಾರವು ತೆರೆದೇ ಇರುತ್ತದೆ.

ಸಕಾಲದಲ್ಲಿ ಹೋಗಿ ಮಂದಿರವನ್ನು ಪ್ರವೇಶಮಾಡಿದರೂ ದೇವರಿಂದ ನೀವು ದೂರವೇ ಇರಬೇಕು. ಆದರೆ ಗಂಗೆಯ ಒಳಗೆ ಹೋಗಬಹುದು. ಅದನ್ನು ನಿಮ್ಮದನ್ನಾಗಿ ಮಾಡಿಕೊಳ್ಳಬಹುದು. ಮಂದಿರಪ್ರವೇಶಕ್ಕೆ ನಿಬಂಧನೆ ಇದೆ. ಅದು ಹೇಳುತ್ತದೆ, ಮೊದಲು ಸ್ನಾನ ಮಾಡಿ ಬಾ, ಶುದ್ಧನಾಗಿ ಬಾ, ಪವಿತ್ರನಾಗಿ ಬಾ. ಆದರೆ ಗಂಗೆ ಹೇಳುತ್ತಾಳೆ: "ಹೇಗಾದರೂ ಸರಿಯೆ, ನನ್ನ ಹತ್ತಿರ ಬಂದರಾಯಿತು. ನನ್ನ ಬಳಿಸಾರುವುದಕ್ಕೆ ಯಾವ ಪವಿತ್ರತೆಯ ಆವಶ್ಯಕತೆ ಇಲ್ಲ. ನನ್ನಲ್ಲಿ ಮುಳುಗಿ ಪವಿತ್ರನಾಗು."

ವಾಲ್ಮೀಕಿಯ ರಾಮಾಯಣ ಆದಿಕಾವ್ಯ, ಮಹಾಕಾವ್ಯ. ಅದು ದೊಡ್ಡ ದೇವಮಂದಿರದಂತೆ ದಿವ್ಯರತ್ನಗಳಿಂದ ಕೂಡಿದೆ. ಅದರ ವೈಭವ ಅನುಪಮ. ಅದರ ಸಮೃದ್ಧಿ ಅನುಪಮ. ಹಾಗೆಯೇ ವಾಲ್ಮೀಕಿಯ ಕಾವ್ಯಶೈಲಿ ಅನುಪಮ. ಅದರ ಕಾವ್ಯವಸ್ತು ಅನುಪಮ. ಆದರೂ ಒಂದು ಕೊರತೆ. ವಾಲ್ಮೀಕಿಯ ರಾಮ ನಿಮ್ಮ ರಾಮನಾಗುವುದಿಲ್ಲ. ಅವನು ನಿಮ್ಮವನಾಗುವುದಿಲ್ಲ. ಏನೋ ಒಂದು ಅಂತರವಿರುವ ಹಾಗೆ ಭಾಸವಾಗುತ್ತದೆ.

ಆದರೆ, ತುಲಸೀದಾಸನ ರಾಮ ಗಂಗೆಯ ಪ್ರವಾಹದಂತೆ. ಅವನು ನಮ್ಮ ಬಳಿ ಸದಾ ಇರುತ್ತಾನೆ. ಅವನ ಹತ್ತಿರ ಹೋಗಲು ನಮಗೆ ಯಾವ ತರದ ಭಯ ಆಗುವುದಿಲ್ಲ. ಅವನು ನಮ್ಮಿಂದ ದೊಡ್ಡವನು, ಅವನು ಮಹಾನ್ ವ್ಯಕ್ತಿ ಎಂದು ಅನ್ನಿಸುವುದಿಲ್ಲ. ವಾಲ್ಮೀಕಿ ರಾಮಾಯಣವನ್ನು ಓದಿದಾಗ, ಆಹಾ! ರಾಮ ಅದೆಂತಹ ಮಹಾಪುರುಷ ಎಂದೆನಿಸುತ್ತದೆ. ತುಲಸಿಯ ರಾಮಕಥೆಯನ್ನು ಓದಿದಾಗ



ಗೋಸ್ವಾಮಿ ತುಲಸೀದಾಸರು

ಆಹಾ! ರಾಮ ಬೇರೆಯವರನ್ನು ಅದೆಷ್ಟು ದೊಡ್ಡದಾಗಿ ಕಾಣುತ್ತಾನೆ! ಅನ್ನಿಸುತ್ತದೆ. ತಾನು ದೊಡ್ಡವನಾಗುವ ಗುಣವನ್ನು ವಾಲ್ಮೀಕಿ ವರ್ಣಿಸಿದ್ದರೆ, ಬೇರೆಯವರನ್ನು ದೊಡ್ಡವರನ್ನಾಗಿ ಮಾಡುವ ಗುಣವನ್ನು ತುಲಸೀದಾಸರು ಬಣ್ಣಿಸುತ್ತಾರೆ.

ಇದರ ತಾತ್ಪರ್ಯವೇನು? ವಾಲ್ಮೀಕಿಯು ರಾಮಾಯಣದಲ್ಲಿ ಐತಿಹಾಸಿಕ ದೃಷ್ಟಿಯನ್ನೇ ಪ್ರಧಾನವಾಗಿ ಇರಿಸಿಕೊಂಡಿದ್ದಾರೆ. ಆದರೆ, ತುಳಸೀದಾಸರು ಭಾವುಕ ದೃಷ್ಟಿಯನ್ನೇ ಪ್ರಧಾನವಾಗಿ ಇರಿಸಿಕೊಂಡಿದ್ದಾರೆ. ಈ ಎರಡೂ ದೃಷ್ಟಿಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಮಹತ್ವದ್ದೇ ಆಗಿವೆ. ಆದರೆ, ತುಲಸೀದಾಸರು ಶ್ರೀರಾಮನನ್ನು ನಮ್ಮ ಜೀವನಕ್ಕೆ ಹತ್ತಿರ ತಂದು ನಿಲ್ಲಿಸುತ್ತಾರೆ. ಅಷ್ಟು ಹತ್ತಿರವಾಗಿ ನಿಲ್ಲಿಸಲು ವಾಲ್ಮೀಕಿಗೆ ಸಾಧ್ಯವಾಗಿಲ್ಲ. ಇದಕ್ಕಾಗಿ ಒಂದು ವೇಳೆ ವಾಲ್ಮೀಕಿಯು ಪುನಃ ಅವತರಿಸಿ ಬಂದು, ಹೊಸ ದೃಷ್ಟಿಯಿಂದ ರಾಮಕಥೆಯನ್ನು ರಚಿಸಿದರೆ, ಯಾವ ಆಶ್ಚರ್ಯವೂ ಇಲ್ಲ ಅಥವಾ ವಾಲ್ಮೀಕಿಯೇ ತುಲಸೀದಾಸರ ರೂಪದಲ್ಲಿ ಬಂದಿದ್ದಾರೆ ಎನ್ನಲೂಬಹುದು.

## ಯೋಗಸಮನ್ವಯ

ತುಲಸೀದಾಸರು ರಾಮಾಯಣಕ್ಕೆ ಸರೋವರದ ಉಪಮಾನ ಕೊಡುತ್ತಾರೆ. ಸರೋವರಕ್ಕೆ ಹೋಗುವವರು ಹಲವಾರು ಜನ. ಅವರ ಉದ್ದೇಶವೂ ಹಲವು ಬಗೆ. ಕೆಲವರು ಸ್ನಾನಕ್ಕಾಗಿ ಹೋಗುವರು. ಕೆಲವರು ನೀರು ಕುಡಿಯಲು ಹೋಗುವರು. ಕೆಲವರು ಬಟ್ಟೆ ಒಗೆಯಲು ಹೋಗುವರು. ಇಲ್ಲಿ ರಾಮಕಥೆಯೇ ಸರೋವರ. ಅದರತ್ತ ನಮ್ಮೆಲ್ಲರನ್ನೂ ತುಲಸೀದಾಸರು ಹೀಗೆ ಆಮಂತ್ರಿಸುತ್ತಾರೆ:

ರಾಮಚರಿತೆಯು ದಿವ್ಯಜಲಪೂರಿತ ಸರೋವರದ ಹಾಗಿದೆ. ಸ್ನಾನಕ್ಕೆ ಹೋದ ವ್ಯಕ್ತಿ, ನೀರು ತಿಳಿಯಾಗಿದೆಯೋ ಇಲ್ಲವೋ ಎಂದು ಮೊದಲು ನೋಡುತ್ತಾನೆ. ನೀರು ತಿಳಿಯಾಗಿಲ್ಲದಿದ್ದರೆ ಸ್ನಾನ ಮಾಡಲು

ಮನಸ್ಸು ಮಾಡುವುದಿಲ್ಲ. ನೀರು ಕುಡಿಯಲು ಹೋದ ವ್ಯಕ್ತಿ, ನೀರು ಸ್ವಚ್ಛವಾಗಿದೆಯೆ, ಸಿಹಿಯಾಗಿದೆಯೆ ಎಂದು ನೋಡುತ್ತಾನೆ. ಈಜಲು ಹೋಗುವ ವ್ಯಕ್ತಿ ನೀರು ಆಳವಾಗಿದೆಯೆ ಎಂದು ನೋಡುತ್ತಾನೆ.

ತುಳಸೀದಾಸರ ಆಶಯ ಇದು. ಧಾರ್ಮಿಕ ಪ್ರವೃತ್ತಿಯ ಭಕ್ತಜನ ರಾಮಚರಿತೆಯ ಸ್ವಚ್ಛತೆಯಿಂದ, ತಮ್ಮನ್ನು ಪರಿಶುದ್ಧರನ್ನಾಗಿ ಮಾಡಿ ಕೊಳ್ಳಲಿ. ಯಾರು ಜ್ಞಾನಿಗಳೋ ಅವರು ರಾಮಚರಿತೆಯ ಮಹಿಮೆಯ ಆಳದಲ್ಲಿ ಮುಳುಗಲಿ. ಅವರು ಹೇಳುತ್ತಾರೆ.

**ಲೀಲಾ ಸಗುನ ಜೋ ಕಹಹಿ ಬಖಾನೀ**
**ಸೋಇ ಸ್ವಚ್ಛತಾ ಕರಇ ಮಲಹಾನೀ** ೧-೩೫-೩
**ರಘುಪತಿ ಮಹಿಮಾ ಅಗುನ ಅಬಾಧಾ**
**ಬರನಬ ಸೋಇ ಬರ ಬಾರಿ ಅಗಾಧಾ** ೧-೩೬-೧

"ಯಾರು ಸಗುಣ, ಸಾಕಾರವಾದಿಗಳೋ ಅವರಿಗೆ ರಾಮನ ಪರಿಶುದ್ಧತೆ ಮತ್ತು ಪವಿತ್ರತೆಯೇ ನೀರಿನ ಸ್ವಚ್ಛತೆಯ ಹಾಗಿದೆ. ಯಾರು ನಿರ್ಗುಣ ಉಪಾಸಕರಾದ ಜ್ಞಾನಿಗಳೋ, ಅವರಿಗೆ ಶ್ರೀರಘುಪತಿಯ ವ್ಯಕ್ತಿತ್ವವು ಅತ್ಯಂತ ಮಹಿಮಾನ್ವಿತವೂ, ಪ್ರಾಕೃತಿಕ ಗುಣಗಳಿಗಿಂತ ಅತೀತವೂ ಆಗಿದೆ. ಹೀಗೆ ಆಳವರಿಯದ ಆಳವಾಗಿರುವ ಅಗಾಧ ವಾಗಿರುವ ನೀರಿನಂತೆ ಶ್ರೀರಾಮನ ವ್ಯಕ್ತಿತ್ವವಿದೆ."

### ಈಶ್ವರನು ಸಗುಣನೋ ನಿರ್ಗುಣನೋ?

ಇದೊಂದು ಹಳೆಯ ವಿವಾದ. ಈಶ್ವರನು ನಿರ್ಗುಣ ನಿರ್ವಿ ಕಾರನೋ ಇಲ್ಲಾ ಸಗುಣ ಸಾಕಾರನೋ? ಸಂತರಲ್ಲಿ ಕೆಲವರು ನಿರಾಕಾರ ವಾದಿಗಳು. ಕೆಲವರು ಸಾಕಾರವಾದಿಗಳು. ತುಲಸೀದಾಸರು ಮೇಲಿನ ಯಾವ ವರ್ಗಕ್ಕೂ ಸೇರಿದವರಲ್ಲ. ಅವರು ಸಗುಣವನ್ನೂ ಸ್ವೀಕರಿಸು ತ್ತಾರೆ, ನಿರ್ಗುಣವನ್ನೂ ಸ್ವೀಕರಿಸುತ್ತಾರೆ.

ಯಾರೋ ಒಮ್ಮೆ ತುಲಸೀದಾಸರನ್ನು ಈ ಬಗ್ಗೆ ಕೇಳಿದರು. ಅವರು ತಮ್ಮ ಭಾವನೆಯನ್ನು ಈ ಶಬ್ದಗಳಲ್ಲಿ ಹೇಳುತ್ತಾರೆ:

"ನಿಮ್ಮ ಮನೆಗೆ ಇಬ್ಬರು ಅತಿಥಿಗಳು ಬರುತ್ತಾರೆ. ಒಬ್ಬನನ್ನು ಹೊರಗೆ ಕಳುಹಿಸಿ, ಮತ್ತೊಬ್ಬನನ್ನು ಸತ್ಕರಿಸುವಿರಾ? ಹಾಗೆಯೇ ಸಗುಣ ನಿರ್ಗುಣ ಎರಡನ್ನೂ ನಾನು ಸ್ವೀಕರಿಸುತ್ತೇನೆ. ಇಬ್ಬರಿಗೂ ಉಳಿದು ಕೊಳ್ಳಲು ಎರಡು ಕೋಣೆಗಳನ್ನು ಕೊಡುತ್ತೇನೆ. ಒಬ್ಬರಿಗೆ ಹೃದಯದ ಕೋಣೆಯನ್ನು ಕೊಡುತ್ತೇನೆ. ಇನ್ನೊಬ್ಬರಿಗೆ ಕಣ್ಣಿನ ಕೋಣೆಯನ್ನು ಕೊಡುತ್ತೇನೆ."

### ಹಿಯ ನಿರ್ಗುಣ ನಯನಾನಿ ಸಗುನ
### "ಹೃದಯದಲ್ಲಿ ನಿರ್ಗುಣ, ಕಣ್ಣಲ್ಲಿ ಸಗುಣ'

"ಭಗವಂತನು ನನ್ನ ಹೃದಯದಲ್ಲಿ ನಿರ್ಗುಣ ನಿರಾಕಾರನಾಗಿರುವನು. ನನ್ನ ಕಣ್ಣುಗಳಲ್ಲಿ ಸಗುಣ ಸಾಕಾರನಾಗಿರುವನು. ಅಂತರ್ಯಾಮಿಯ ರೂಪದಲ್ಲಿ ಈಶ್ವರನು ನನ್ನೊಳಗೆ ಕುಳಿತಿರುವನು. ಆದರೆ ಅದರಿಂದ ಕಣ್ಣುಗಳಿಗೆ ಸಂತೋಷ ಸಿಗುವುದಿಲ್ಲ. ಅಲ್ಲವೇ? ಕಣ್ಣೆದುರಿಗೆ ಕಾಣಬರುವ ಭಗವಂತನ ರೂಪ ಮಾಧುರ್ಯ ದರ್ಶನದಿಂದ ಮಾತ್ರ ಕಣ್ಣುಗಳಿಗೆ ಸಂತೃಪ್ತಿ ಸಿಗುತ್ತದೆ."

ಆದರೆ ತುಲಸೀದಾಸರು ಇಲ್ಲಿ ಪಕ್ಷಪಾತ ಮಾಡಿದ್ದಾರೆ. ಒಬ್ಬನಿಗೆ ಉತ್ತಮ ಕೋಣೆ (ಹೃದಯ) ಕೊಟ್ಟಿದ್ದಾರೆ. ಮತ್ತೊಬ್ಬನಿಗೆ ಸಾಧಾರಣ ಕೊಠಡಿ (ಕಣ್ಣು) ಕೊಟ್ಟಿದ್ದಾರೆ. ಅವರ ಹತ್ತಿರ ಬಂದು ಯಾರೋ ಕೇಳಿದರು: "ಮಹಾರಾಜ್, ನೀವು ಉತ್ತಮ ಸ್ಥಾನವನ್ನು ಕೊಟ್ಟಿರುವುದು ಯಾರಿಗೆ? ಈಗ ನೀವು ಹೇಳಬೇಕು. ಹೃದಯ ಶ್ರೇಷ್ಠವೋ, ಕಣ್ಣುಗಳು ಉತ್ತಮವೋ? ಇದರ ನಿರ್ಣಯ ಮಾಡುವುದಾದರೂ ಯಾರು? "
ತುಲಸೀದಾಸರು ಈಗಾಡುವ ಮಾತು ಸ್ವಾರಸ್ಯವಾದದ್ದು, ಸಿಹಿಯಾದದ್ದು. ಅವರು ಹೇಳುತ್ತಾರೆ, "ತಮ್ಮಾ, ಎಲ್ಲಕ್ಕಿಂತ ಶ್ರೇಷ್ಠವಾದ ಕೊಠಡಿಯನ್ನು ನಾನು ಬೇರೆಯವನಿಗೆ ಕೊಟ್ಟಿದ್ದೇನೆ, ಮೂರನೆಯವನಿಗೆ ಕೊಟ್ಟಿದ್ದೇನೆ." ಅದು ಹೇಗೆ? ಅವರ ಮಾತುಗಳಲ್ಲೇ ಕೇಳಿ.

**ಹಿಯ ನಿರ್ಗುಣ ನಯನಾನಿ ಸಗುನ ರಸನಾ ರಾಮ ಸುನಾಮ**
**ಮನಹುಂ ಪುರಟ ಸಂಪುಟ ಲಸತ, ತುಲಸೀ ಲಲಿತ ಲಲಾಮ**

"ಕಣ್ಣುಗಳಲ್ಲಿ ಸಗುಣ ಸಾಕಾರ ರೂಪವನ್ನು ನಿಲ್ಲಿಸಿಕೊಂಡಿದ್ದೇನೆ. ಹೃದಯದಲ್ಲಿ ನಿರ್ಗುಣ ನಿರಾಕಾರ ರೂಪವನ್ನು ನಿಲ್ಲಿಸಿಕೊಂಡಿದ್ದೇನೆ. **ಶ್ರೀರಾಮನಾಮವೆಂಬ ರತ್ನವನ್ನು ನಾಲಿಗೆಯಲ್ಲಿ ಇರಿಸಿಕೊಂಡಿದ್ದೇನೆ.** "

ದಿವ್ಯರತ್ನವನ್ನು ಸಂಪುಟದಲ್ಲಿ ಇರಿಸುವರು. ಸಗುಣ ನಿರ್ಗುಣಗಳು ಆ ಸಂಪುಟದ ಎರಡು ಮುಚ್ಚಳಗಳು. ಅವುಗಳ ಮಧ್ಯದಲ್ಲಿ ಶ್ರೀರಾಮನಾಮವೆಂಬ ರತ್ನವನ್ನು ಇಡಲಾಗಿದೆ.

ಒಬ್ಬನ ರೂಪದ ವಿಚಾರದಲ್ಲಿ ವಿವಾದವಿದ್ದರೆ ಏನು ಮಾಡು ವೆವು? ಅವನನ್ನು ಕರೆಯುವೆವು. ಅವನು ಬಂದು ತನ್ನ ಪರಿಚಯ ಮಾಡಿಕೊಡುವನು. ತುಲಸೀದಾಸರು ಹೇಳುತ್ತಾರೆ: "ನಿಮಗೆ ದೇವರ ರೂಪ ಸಗುಣವೋ ನಿರ್ಗುಣವೋ ಸಂದೇಹ ತಾನೇ? ನೀವು ರಾಮನಾಮದಿಂದ ದೇವರನ್ನು ಕರೆಯಿರಿ. ಅವನ ರೂಪ ಹೇಗೇ ಇರಲಿ, ಅವನು ನಿಮ್ಮೆದುರು ಬಂದು ತನ್ನ ಪರಿಚಯ ಹೇಳಿಕೊಳ್ಳುವನು. ಸಗುಣನಾಗಿದ್ದರೆ, ಸಗುಣರೂಪದಿಂದ ಬರುವನು. ನಿರ್ಗುಣನಾಗಿದ್ದರೆ ಅದರ ಅರಿವನ್ನೂ ಉಂಟುಮಾಡುವನು.

ರಾಮಚರಿತಮಾನಸದಲ್ಲಿ ವರ್ಣಿಸಲಾದ ರಾಮನ ನಿರ್ಗುಣ ಮಹಿಮೆ ನೀರಿನಂತೆ ಆಳವಾದುದು, ಸಗುಣ ಸಾಕಾರ ಲೀಲೆ ನೀರಿನಂತೆ ಸ್ವಚ್ಛ ಗುಣವುಳ್ಳದ್ದು.

**ರಘುಪತಿ ಮಹಿಮ ಅಗುನ ಅಬಾಧಾ**
**ಬರನ ಬ ಸೋಇ ಬರ ಬಾರಿ ಅಗಾಧಾ** ೧-೨೬-೧

ನೀರಿನ ಸ್ವಚ್ಛತೆಗೂ ಅದರ ಆಳಕ್ಕೂ ಅವಿನಾಭಾವ ಸಂಬಂಧವಿದೆ. ನೀರು ಎಷ್ಟು ಆಳವಿರುತ್ತದೋ ಅಷ್ಟು ಸ್ವಚ್ಛವಾಗಿರುತ್ತದೆ. ನೀವು ಒಂದು ಸಣ್ಣ ಪಾತ್ರೆಯಲ್ಲಿ ಶುದ್ಧ ನೀರು ಹಿಡಿದು, ಕೊಳೆ ಬಟ್ಟೆ ಒಗೆದರೆ, ಬಟ್ಟೆಯ ಕೊಳೆ ಹೋಗುತ್ತದೆ. ಆದರೆ ನೀರು ಕೊಳೆಯಾಗುತ್ತದೆ. ಹಾಗೆಯೇ, ರಾಮನನ್ನು ಕೇವಲ ಸಗುಣನೆಂದು ಭಾವಿಸಿಕೊಂಡರೆ, ಅವನ ಮಹಿಮೆಯ ಆಳವನ್ನು ನಾವು ಗ್ರಹಿಸಿರುವುದಿಲ್ಲ. ಪಾತ್ರೆಯಲ್ಲಿನ ನೀರಿನಂತೆ ಅದು. ಅಂತಹ ರಾಮನ ಚಿಂತನೆಯಿಂದ ನಾವು ಶುದ್ಧರಾಗು ತ್ತೇವೆ. ಆದರೆ ಸ್ವತಃ ರಾಮನು ಮಲಿನನಾಗುವನು! ಆದ್ದರಿಂದ ಸಗುಣ ರಾಮನನ್ನು ನಿರ್ಗುಣ ದೃಷ್ಟಿಯಿಂದಲೂ ನೋಡುವ ಆವಶ್ಯಕತೆ ಇದೆ. ಅವನಲ್ಲಿ ನಿರ್ಗುಣದ ಅಗಾಧತೆ ಇದ್ದರೇನೇ ಸಗುಣದ ಸ್ವಚ್ಛತೆ ಬರುತ್ತದೆ. ನಿರ್ಗುಣದ ಆಳವನ್ನು ನಾವು ಮರೆತರೆ, ಸಗುಣದ ಸ್ವಚ್ಛತೆ ಇರಲಾರದು.

ತುಳಸೀದಾಸರ ಶ್ರೀರಾಮನಲ್ಲಿ ನಿರ್ಗುಣದ ಆಳವೂ ಇದೆ; ಸಗುಣದ ಸ್ವಚ್ಛತೆಯೂ ಇದೆ. ಯಾರು ಕರ್ಮಯೋಗಿಗಳೋ ಅವರು ಅದರ ಸ್ವಚ್ಛತೆಯನ್ನು ಇಷ್ಟಪಡುತ್ತಾರೆ. ಸರೋವರಕ್ಕೆ ಸ್ನಾನಕ್ಕೆ ಹೋಗುವವರು

ನೀರು ಸ್ವಚ್ಛವಾಗಿರಬೇಕೆಂದು ಬಯಸುತ್ತಾರಲ್ಲ, ಇದೂ ಹಾಗೆಯೇ. ನೀರು ಕುಡಿಯುವವರು ರುಚಿ ಮತ್ತು ಶೀತಲತೆಯನ್ನು ಇಷ್ಟಪಡುತ್ತಾರೆ; ಹಾಗೆಯೇ ಭಗವಂತನ ನಾಮವನ್ನು ಸೇವಿಸುವ ಭಕ್ತಜನರು ಭಗವಂತನ ಮಧುರತೆಯನ್ನು ಇಷ್ಟಪಡುತ್ತಾರೆ. ಅಂತಹವರಿಗೆ ತುಲಸೀದಾಸರು ಹೇಳುತ್ತಾರೆ:

**ಪ್ರೇಮ ಭಗತಿ ಜೋ ಬರನಿನ ಜಾಈ,**
**ಸೋಇ ಮಧುರತಾ ಸುಸೀತಲತಾಈ** ( ೧-೩೬-೩)

"ರಾಮಚರಿತಮಾನಸದಲ್ಲಿರುವ ಪ್ರೇಮ ಮತ್ತು ಭಕ್ತಿಗಳೆ ಮಧುರತೆ ಮತ್ತು ಶೀತಲತೆಗಳು."

ಜ್ಞಾನಿಗಳೆಂದರೆ, ಭಗವತ್ಸಾಗರದ ಈಜುಗಾರರು. ಅವರಿಗೆ ಭಗವಂತನ ಮಹಿಮೆಯ ಆಳ ಬೇಕು. ಭಕ್ತರು ಭಗವಂತನನ್ನು ತಮ್ಮವನನ್ನಾಗಿ ಮಾಡಿಕೊಳ್ಳುತ್ತಾರೆ. ಆತನ ದಿವ್ಯನಾಮಾಮೃತವನ್ನು ಕುಡಿಯುತ್ತಾರೆ. ಹೀಗೆ ತುಲಸೀದಾಸರು ತಮ್ಮ ಕೃತಿಯಲ್ಲಿ ಎಲ್ಲ ಯೋಗಗಳ ಸಾಧಕರಿಗೂ ಅವಕಾಶ ಮಾಡಿಕೊಟ್ಟಿದ್ದಾರೆ. ಯಾರು ಜ್ಞಾನಿಗಳೋ ಅವರು ಭಗವನ್ಮಹಿಮೆಯ ಆಳವನ್ನು ನೋಡಲಿ. ಯಾರು ಭಕ್ತರೋ ಅವರು ಈ ಚರಿತ್ರೆಯಲ್ಲಿನ ಮಧುರತೆ ಮತ್ತು ಶೀತಲತೆಯನ್ನು ಸವಿದು ಆನಂದಪಡಲಿ. ಅಷ್ಟು ಮಾತ್ರವಲ್ಲ, ಯಾರು ಕರ್ಮ ಯೋಗಿಗಳೋ ಅವರು ಅದರ ಸ್ವಚ್ಛತೆಯನ್ನು ನೋಡಿ ಪರಿಶುದ್ಧರಾಗಲಿ.

ಇನ್ನೊಂದು ಸ್ವಾರಸ್ಯದ ಸಂಗತಿ. ರಾಮಚರಿತಮಾನಸವನ್ನು ಸರೋವರದ ನಾಲ್ಕು ಘಟ್ಟಗಳಲ್ಲಿ ನಡೆಯುವ ಸಂಭಾಷಣೆಯಂತೆ, ತುಲಸೀದಾಸರು ವರ್ಣಿಸುತ್ತಾರೆ. ಮೊದಲನೆಯದು ಜ್ಞಾನಘಟ್ಟ. ಅಲ್ಲಿ ನಡೆಯುವುದು ಭಗವಾನ್ ಶಂಕರ ಮತ್ತು ಪಾರ್ವತಿಯರ ಸಂಭಾಷಣೆ. ಎರಡನೆಯದು ಕರ್ಮದ ಘಟ್ಟ. ಅಲ್ಲಿ ನಡೆಯುವುದು ಯಾಜ್ಞವಲ್ಕ್ಯ ಮತ್ತು ಭರದ್ವಾಜ ಋಷಿಗಳ ಸಂವಾದ. ಮೂರನೆಯದು, ಭಕ್ತಿ ಘಟ್ಟ. ಅಲ್ಲಿ ನಡೆಯುವುದು ಕಾಕಭುಷುಂಡಿ ಮತ್ತು ಗರುಡರ ಸಂವಾದ. ನಾಲ್ಕನೆಯದು, ದೀನತೆಯ ಘಟ್ಟ. ಅಲ್ಲಿ ನಡೆಯುವುದು ತುಲಸೀದಾಸರ ಸಂವಾದ.

ತುಲಸೀದಾಸರನ್ನು ಯಾರೋ ಕೇಳಿದರು: "ಎಲ್ಲವೂ ರಾಮಚರಿತ್ರೆಯಲ್ಲಿದೆ. ನೀವು ಜನರಿಗೆ ನಿಮ್ಮ ಸ್ವಂತದ್ದು ಏನು ಕೊಟ್ಟಿರಿ?" ಆಗ ಅವರು ಹೀಗೆ ಹೇಳುತ್ತಾರೆ. ನೀರಿನಲ್ಲಿರುವ ಆಳ, ಸ್ವಚ್ಛತೆ, ಮಧುರತೆ ಮತ್ತು ಶೀತಲತೆ - ಇವೆಲ್ಲವನ್ನೂ ರಾಮನ ವ್ಯಕ್ತಿತ್ವದಲ್ಲಿ ಕಾಣಬಹುದು. ಆದರೆ ನೀರಿಗಿರುವ ಇನ್ನೊಂದು ಗುಣ ರಾಮನಿಗಿಲ್ಲ. ಅದೆಂದರೆ, ಮೃದುತ್ವ ಅಥವಾ ಲಘುತ್ವ ರಾಮನಚರಿತ್ರೆಯನ್ನು ಹಗುರವಾಗಿ ಮಾಡಿ, ಎಲ್ಲರಿಗೂ ತಲುಪಿಸಿರುವುದೇ ನಾನು ಮಾಡಿರುವ ಕೆಲಸ ಎಂದು ತುಲಸೀದಾಸರು ಹೇಳಿಕೊಳ್ಳುತ್ತಾರೆ. ಅವರು ಭಗವಂತನಿಗೆ ಹೀಗೆ ಪ್ರಾರ್ಥಿಸುತ್ತಾರೆ: "ನಾನು ನನ್ನ ಲಘುತ್ವವನ್ನು ಭಗವಂತನಲ್ಲಿ ಆರೋಪಿಸಿಬಿಟ್ಟಿದ್ದೇನೆ. ಪ್ರಭು, ನಿನ್ನ ಚರಿತ್ರೆಯನ್ನು ನಾನು ಎಲ್ಲಾದರೂ ಹಗುರ ಮಾಡಿದ್ದರೆ, ಅದು ಸಾರ್ಥಕವಾಗಲಿ." ಶ್ರೀತುಲಸೀದಾಸರ ಮಾತಿನ ತಾತ್ಪರ್ಯ ಇಷ್ಟೇ. ಶ್ರೀರಾಮನ ಮಹಿಮೆ ಅವನು ಎಷ್ಟು ದೊಡ್ಡವನು ಎಂಬುದರಲ್ಲಿ ಇಲ್ಲ. ಬದಲಾಗಿ, ಅವನು ಒಬ್ಬ ಸಾಧಾರಣ ಮನುಷ್ಯನ ಮನಸ್ಸನ್ನೂ ಆಕರ್ಷಿಸಿ, ಅವನನ್ನು ಅಸಾಧಾರಣ ಸ್ತರಕ್ಕೆ ಕರೆದುಕೊಂಡು ಹೋಗುತ್ತಾನೆ ಎಂಬುದರಲ್ಲಿದೆ.

### ಭಗವಂತನಿರುವುದು ಎಲ್ಲಿ?

ತುಲಸೀದಾಸರು ನಿರ್ಗುಣ ಮತ್ತು ಸಗುಣ - ಎರಡನ್ನೂ ಸ್ವೀಕರಿಸುತ್ತಾರೆ. ಬ್ರಹ್ಮವು ನಿರ್ಗುಣವಾದರೂ ಭಕ್ತರ ಆಕಾಂಕ್ಷೆಯನ್ನು ಪೂರ್ಣಮಾಡಲು, ಸಗುಣನಾಗಿದ್ದಾನೆ. ಬ್ರಹ್ಮನು ಹೇಗಿರುವನೋ ಹಾಗೆಯೇ ಅರಿಯಬೇಕು ಎನ್ನುವುದು ಜ್ಞಾನ. ಭಕ್ತನು ಭಗವಂತನನ್ನು ಯಾವ ರೂಪದಲ್ಲಿ ನೋಡಲು ಇಚ್ಛಿಸುತ್ತಾನೋ, ಹಾಗೆಯೇ ಭಗವಂತನು ಕಾಣಿಸಿಕೊಳ್ಳಬೇಕು ಎನ್ನುವುದು ಭಕ್ತಿ.

ಭಾಗವತದಲ್ಲಿ ಒಂದು ಕಥೆ ಬರುತ್ತದೆ. ರಾಕ್ಷಸರಿಂದ ಕಿರುಕುಳಕ್ಕೆ ಒಳಗಾದ ದೇವತೆಗಳು ಭಗವಂತನಲ್ಲಿ ಮೊರೆ ಹೋಗುತ್ತಾರೆ. ಅದನ್ನು ರಾಮಚರಿತಮಾನಸದಲ್ಲಿ ಕೆಲವು ಮಾರ್ಪಾಡು ಮಾಡಿ ಹೇಳಿದ್ದಾರೆ. ಅದರ ಪ್ರಕಾರ, ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಲು, ಅವನೆಲ್ಲಿದ್ದಾನೆ ಎಂದು ದೇವತೆಗಳು ಹುಡುಕುತ್ತಾರೆ. ಒಬ್ಬರು ಹೇಳುತ್ತಾರೆ, ಭಗವಂತ ವೈಕುಂಠದಲ್ಲಿದ್ದಾನೆ. ಇನ್ನೊಬ್ಬರು ಹೇಳುತ್ತಾರೆ, ಅವನು ಕ್ಷೀರಸಾಗರದಲ್ಲಿದ್ದಾನೆ. ಇದರಲ್ಲೇ ಎರಡು ಗುಂಪುಗಳಾಗುತ್ತವೆ. ವೈಕುಠದಲ್ಲಿ ಪ್ರವೇಶ ಕಷ್ಟ, ಕ್ಷೀರಸಾಗರಕ್ಕೆ ಹೋಗೋಣ ಎಂದು ಕೆಲವರು ವಾದಿಸುತ್ತಾರೆ. ಇಲ್ಲಾ ವೈಕುಂಠವೇ ಅವನ ಧಾಮ ಎಂದು ಮತ್ತೆ ಕೆಲವರು ಹೇಳುತ್ತಾರೆ. ಈ ಮಧ್ಯೆ ಶಂಕರನು ಸುಮ್ಮನೆ ಕುಳಿತಿರುತ್ತಾನೆ. ದೇವತೆಗಳು ಅವನನ್ನು ಕೇಳುತ್ತಾರೆ, "ಮಹಾಸ್ವಾಮಿ, ನಿಮ್ಮ ದೃಷ್ಟಿಯಲ್ಲಿ ಭಗವಂತನು ಎಲ್ಲಿರುವನೆಂದು ಹೇಳುವಿರಾ? ಕ್ಷೀರಸಾಗರದಲ್ಲೋ ಅಥವಾ ವೈಕುಂಠದಲ್ಲೋ?" ಆಗ ಶಂಕರನು ಹೇಳುತ್ತಾನೆ:

**ಅಬ ಜಗಮಯ ಸಬ ರಹಿತ ಬಿರಾಗೀ**
**ಪ್ರೇಮ ತೆ ಪ್ರಭು ಪ್ರಗಟಇ ಜಿಮಿ ಆಗೀ** ೧.೧೮೪.೪

**ಜಾಕೇ ಹೃದಯ ಭಗತಿ ಜಸಿ ಪ್ರೀತೀ**
**ಪ್ರಭು ತಹ ಪ್ರಗಟ ಸದಾ ತೆಹಿ ರೀತೀ** ೧.೧೮೪.೨

"ಭಗವಂತನು ಚರಾಚರ ವಸ್ತುಗಳಿಂದ ತುಂಬಿದ ಜಗತ್ತೇ ಆಗಿದ್ದಾನೆ. ಆದರೂ ಅವನು ವಿಕಾರರಹಿತನು, ವಿರಕ್ತನು, ಅನಾಸಕ್ತನು. ಅಗ್ನಿ ಅವ್ಯಕ್ತ ತತ್ತ್ವವಾದರೂ ಕಟ್ಟಿಗೆಗಳ ಘರ್ಷಣೆಯ ಮೂಲಕ ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಪ್ರೇಮಾತಿಶಯವಾದ ಭಕ್ತಿಯ ಮೂಲಕ ಭಗವಂತನು ಕಾಣಿಸಿಕೊಳ್ಳುತ್ತಾನೆ."

ಶಂಕರನ ಮಾತಿನ ಆಶಯ ಇದು. ಕಟ್ಟಿಗೆಯಲ್ಲಿರುವ ಬೆಂಕಿಯನ್ನು ನಾವು ಘರ್ಷಣೆಯಿಂದ ಪಡೆದುಕೊಳ್ಳದಿದ್ದರೆ, ಅದರ ಲಾಭವನ್ನು ಹೊಂದಲಾರೆವು. ಹಾಗೆಯೇ, ನಿರ್ಗುಣ ನಿರಾಕಾರ ಬ್ರಹ್ಮನಿಗೆ ನಮ್ಮ ಪ್ರೇಮದಿಂದ ಸಗುಣ ಸಾಕಾರ ರೂಪ ಕೊಟ್ಟು ಎಲ್ಲಿಯವರೆಗೆ ಸಕ್ರಿಯವನ್ನಾಗಿ ಮಾಡಲಾರೆವೋ ಅಲ್ಲಿಯ ತನಕ ನಮ್ಮ ಸಮಸ್ಯೆಗಳಿಗೆ ಸಮಾಧಾನ ದೊರಕದು. ಹೀಗೆ ತುಲಸೀದಾಸರು ಭಾಗವತದ ಕಥೆಯಲ್ಲಿ ಬದಲಾವಣೆ ಮಾಡಿದ್ದಾರೆ. ಮೂಲ ಕಥೆಯಲ್ಲಿ ದೇವತೆಗಳು ಕ್ಷೀರಸಾಗರಕ್ಕೆ ಹೋಗುತ್ತಾರೆ. ಇಲ್ಲಿ ಕುಳಿತಿದ್ದಲ್ಲಿಯೇ ಭಗವಂತನನ್ನು ಕರೆಯುತ್ತಾರೆ.

ತುಲಸೀದಾಸರು ಭಗವಂತನು ಕ್ಷೀರಸಾಗರದಲ್ಲಿಯೋ ಇಲ್ಲಾ ವೈಕುಂಠದಲ್ಲಿಯೋ ಇದ್ದಾನೆ ಎಂದು ವರ್ಣಿಸಿದ್ದರೆ, ಭಗವಂತ ಮೂಲ ರೂಪದಲ್ಲಿ ಸಗುಣನೆಂದೇ ಆಗಿಬಿಡುತ್ತಿತ್ತು. ಆದ್ದರಿಂದಲೇ, ಅವರು ಹೇಳುತ್ತಾರೆ, ನಾವು ಭಗವಂತನನ್ನು ಹುಡುಕಿಕೊಂಡು ಎಲ್ಲಿಗೂ ಹೋಗಬೇಕಿಲ್ಲ ಎಂದು. ಕಷ್ಟಗಳು ಬಂದಾಗ, ನಾವಿರುವಲ್ಲಿಯೇ ಇದ್ದು, ಭಗವಂತನನ್ನು ಕರೆಯಬಹುದು. ಮುಖ್ಯವಾದ ವಿಷಯವೇನೆಂದರೆ, ನಾವು ಭಗವಂತನತ್ತ ಹೋಗುವ ಆವಶ್ಯಕತೆಯೇ ಇಲ್ಲ. ನಾವು ಕರೆದ ಕಡೆ, ಕರೆದ ಹೊತ್ತಿನಲ್ಲಿ ಭಗವಂತನೇ ನಮ್ಮೆಡೆಯೇ ನಡೆದು ಬರುತ್ತಾನೆ.